

# ಫಿಂಗರ್ ಮಂಕಿ



ಫಿಂಗರ್ ಮಂಕಿ, ಪಾಕೆಟ್ ಮಂಕಿ, ಕುಳ್ಳ ಕೋತಿ ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಈ ಪುಟ್ಟ ಮಂಗ ಜಗತ್ತಿನ ಅತ್ಯಂತ ಪುಟ್ಟ ಕೋತಿ ಎಂದು ಹೆಸರಾಗಿದೆ.

'ಸೆಬ್ಯುಲ್ಲಾ ಪಿಗ್ಮಿಯೆ' ಎಂಬ ವೈಜ್ಞಾನಿಕ ಹೆಸರುಳ್ಳ, ಕೋತಿಯ ಜಾತಿಗೆ ಸೇರಿದ ಈ 'ಮಿನಿ ವಾನರ'ನನ್ನು ಜನರು 'ವಾಮನ ವಾನರ ಅಥವಾ ಕುಬ್ಜ ವಾನರ' ಎಂದು ಕರೆಯುವುದಿದೆ. ಈ ಪುಟಾಣಿ ಮಂಗಗಳು ಹೆಚ್ಚಾಗಿ ಬ್ರೆಜಿಲ್, ಬೊಲೊವಿಯಾ, ಕೊಲಂಬಿಯಾ, ಪೆರು, ದಕ್ಷಿಣ ಅಮೆರಿಕಗಳ ನದಿ ಸಮೀಪದ ಅರಣ್ಯಗಳಲ್ಲಿ ಕಂಡುಬರುತ್ತವೆ.

ದಕ್ಷಿಣ ಅಮೆರಿಕದ ಅರಣ್ಯಗಳಲ್ಲಿ ಬಹುಸಂಖ್ಯೆಯಲ್ಲಿ ಕಂಡುಬರುವ ಈ ಕೋತಿ ಎಷ್ಟು ಚಿಕ್ಕದೆಂದರೆ ಮನುಷ್ಯನ ಕೈಬೆರಳೊಂದರ ಮೇಲೆ ಅನಾಯಾಸವಾಗಿ ಕುಳಿತುಕೊಳ್ಳುವಷ್ಟೇ ಪುಟ್ಟದು. ಅದಕ್ಕೆಂದೇ ಇದಕ್ಕೆ 'ಫಿಂಗರ್ ಮಂಕಿ' ಎಂಬ ಹೆಸರು ಬಂದಿದೆ. ಗಾತ್ರದಲ್ಲಿ ಗಂಡು ಮತ್ತು ಹೆಣ್ಣುಗಳೆರೆಡೂ ಒಂದೇ ಆಗಿರುವುದಲ್ಲದೆ ಇವುಗಳ ತೂಕವೂ ಹೆಚ್ಚೆಂದರೆ 100 ಗ್ರಾಂಗಳ ಆಜುಬಾಜಿನಲ್ಲಿದೆ. ಉದ್ದವಂತೂ ಅಡಿಯಿಂದ ಮುಡಿಯವರೆಗೂ 5 ಇಂಚುಗಳನ್ನೂ ಮೀರುವುದಿಲ್ಲ. ಅಳಿಲಿನಂತೆ ಮರದ ಕೊಂಬೆಗಳ ಮೇಲೆ ಜಿಗಿಯುತ್ತಾ ಸಾಗುವ ಈ ಮಂಗಗಳ ಚೆಲ್ಲಾಟವನ್ನು ನೋಡುವುದೇ ಒಂದು ಚಂದ.

ತಮ್ಮ ತಲೆಯನ್ನು 180 ಡಿಗ್ರಿ ಕೋನಗಳಷ್ಟು ತಿರುಗಿಸುವ ಸಾಮರ್ಥ್ಯ ಈ ಮಂಗಗಳಿಗಿದೆ. ಬಾಯಿಯಲ್ಲಿ ಚೂಪಾದ ಬಾಚಿಹಲ್ಲುಗಳಿದ್ದು ಜೊತೆಗೆ ಕೈಬೆರಳುಗಳಲ್ಲಿನ ಉಗುರುಗಳಿಂದಾಗಿ ಮರದ ಮೇಲಿನ ಜೇಡಗಳನ್ನು, ಜೀರುಂಡೆ, ಇರುವೆಗಳು, ದುಂಬಿಗಳು ಮುಂತಾದ ಕೀಟಗಳನ್ನು ಶೀಘ್ರವಾಗಿ ಹಿಡಿದು ತಿನ್ನಬಲ್ಲವು. ಕೆಲವೊಮ್ಮೆ ಸಸ್ಯದ ರಾಳ, ಜೀವರಸ, ಚಿಗುರು ಹಾಗೂ ಹಣ್ಣುಗಳನ್ನೂ ತಿನ್ನುತ್ತವೆ. ಸದ್ಯ ಅಳಿವಿನಂಚಿನಲ್ಲಿರುವ ಈ ಪುಟಾಣಿ ಕೋತಿಗಳ ಸಂರಕ್ಷಣೆ ಮಾಡಬೇಕಾಗಿದೆ.

■ ಪ.ನಾ. ಹಳ್ಳಿ ಹರೀಶ್ ಕುಮಾರ್